ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಹೋದ ಸಾರಿ ಮಳೆ ಅಭಾವದಿಂದ ಬರಗಾಲ ಪರಿಸ್ಥಿತಿ ಉಂಟಾದ ಕಾರಣ ಸಾಕಷ್ಟು ಗಿಡಗಳು ಒಣಗಿ ಹೋಗಿವೆ ಎನ್ನತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದೇರ ಸಲುವಾಗಿ ಎಷ್ಟು ಕೊಳವೆ ಬಾವಿಗಳನ್ನು ಹಾಕಿಸಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಜೊತೆಗೆ, ಕೇಂದ್ರ ಸರ್ಕಾರದ ಕೋಕೋನಟ್ ಡೆವಲಪ್‌ಮೆಂಟ್ ಬೋರ್ಡಿಗೆ ಇಂಪ್ರೂವ್‌ಮೆಂಟ್ ಸಲುವಾಗಿ 30–63 ಲಕ್ಷ ರೂಪಾಯಿನ ಪ್ರೊಪೋಸಲ್ ಕಳುಹಿಸಬೇಕಾಗಿದೆ. ಅದು ಬಂದಾಗ ಹೆಚ್ಚಿನ ಸೌಲಭ್ಯ ಸಿಗಬಹುದು. ಒಟ್ಟಿನಲ್ಲಿ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ, ಅವನ್ನು ಗಣನೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತೋಟದಲ್ಲಿ ಇಳಿಜಾರು ಪ್ರದೇಶ ಇರುವುದರಿಂದ ಕಾಂಡೂರ ಬಂಡಿಂಗ್ ಮಾಡುವುದು ಅವಶ್ಯಕವಾಗಿದೆ. ಆ ಕಡೆ ಅದಷ್ಟು ಜಾಗ್ರತೆ ಲಕ್ಷ್ಯ ಕೊಡುವುದಕ್ಕೆ ಸಾಧ್ಯವೆ ? ಆ ಪ್ರದೇಶದಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಅದಕ್ಕಾಗಿ ಇಟ್ಟಿರುವ ಹಣದಲ್ಲಿ ಈ ಕೆಲಸವನ್ನು ತೆಗೆದು ಕೊಳ್ಳುವುದಕ್ಕೆ ಸಾಧ್ಯವೆ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ವಿಷಯ : ಸಂಕೇಶ್ವರದಲ್ಲಿ ಪಶುವೈದ್ಯ ಕಾಲೇಜು.

ಪ್ರ. 207 (7) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಸರಕಾರದವರಿಗೆ ಸಂಕೇಶ್ವರದಲ್ಲಿ ಪಶುವೈದ್ಯ ಮಹಾ ವಿದ್ಯಾಲಯವನ್ನು ಪ್ರಾರಂಭಿಸಲು ಯಾವುದಾದರೂ ಸಂಸ್ಥೆಯಿಂದ ಮನವಿಗಳು ಬಂದಿವೆಯೇ ?

(ಆ) ಹಾಗಿದ್ದಲ್ಲಿ ತಗಲುವ ಖರ್ಚಿನ ವಿವರಗಳೇನು ;

(ಇ) ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಪಶು ಮಹಾ ವಿದ್ಯಾಲಯಕ್ಕೆ ಸಂಕೇಶ್ವರದಲ್ಲಿ ಪ್ರಾರಂಭಿಸುವುದಕ್ಕೆ ಆಶ್ವಾಸನೆ ಕೊಟ್ಟಿದ್ದು ನಿಜವೇ ?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

(ಅ) ಬಂದಿದೆ.

(ಆ) ಅದು ಈಗ ಉದ್ಭವಿಸುವುದಿಲ್ಲ.

(ಇ) ಮನವಿಯನ್ನು ಸರಕಾರವು ಪರಿಶೀಲಿಸುವುದಾಗಿ ಮುಖ್ಯಮಂತ್ರಿಯವರು ಆಶ್ವಾಸನೆ ನೀಡಿದ್ದರು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ನನ್ನ (ಅ) ಪ್ರಶ್ನೆಗೆ ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ ಯಾವ ಸಂಸ್ಥೆಯಿಂದ ಬಂದಿದೆ ? (ಆ) ಪ್ರಶ್ನೆಗೆ ಈಗ ಉದ್ಭವಿಸುವುದಿಲ್ಲ ಎಂದಿದ್ದಾರೆ. ಆಂದಾಗ ಹಣದ ಅಂದಾಜು ಇಲ್ಲದಿದ್ದರೆ ಸಂಸ್ಥೆಯನ್ನು ಕಟ್ಟಲಿಕ್ಕೆ ಸಾಧ್ಯವೇ ? ಆ ದೃಷ್ಟಿಯಿಂದ ಎಸ್ಟಿಮೇಟೆಡ್ ಕಾಸ್ಟ್ ಎಷ್ಟು ? (ಇ) ಪ್ರಶ್ನೆಗೆ ಪರಿಶೀಲಿಸಲಾಗುವುದು ಎಂದರೆ ಆಗುವುದಿಲ್ಲ. ದಿಟವಾದ ಉತ್ತರವನ್ನು ಕಾಣಿಸಬೇಕಾಗಿತ್ತು, ಆದರೆ ಕಾಣಿಸಲಿಲ್ಲ. ಈ ಬಗ್ಗೆ ನಿರ್ದಿಷ್ಟವಾಗಿ ಉತ್ತರಿಸಬೇಕಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಸಂಕೇಶ್ವರದ ವಿದ್ಯಾವರ್ಧಕ ಸಂಸ್ಥೆಯಿಂದ ಬೇಡಿಕೆ ಬಂದಿದೆ. ಸಾಮಾನ್ಯವಾಗಿ ಒಂದು ವೆಟರ್ನರಿ ಕಾಲೇಜನ್ನು ಪ್ರಾರಂಭ ಮಾಡಬೇಕಾದರೆ ರೆಕರಿಂಗ್ 30 ಲಕ್ಷ ರೂಪಾಯಿ ಮತ್ತು ನಾನ್ ರೆಕರಿಂಗ್ 90 ಲಕ್ಷ ರೂಪಾಯಿ ಖರ್ಚು ಬರುತ್ತದೆ. ಇದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಮಲ್ಲಾರಗೌಡ ಪಾಟೀಲ್.—30 ಲಕ್ಷ, 90 ಲಕ್ಷ ಖರ್ಚು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅಷ್ಟೊಂದು ಹಣವನ್ನು ಆ ಸಂಸ್ಥೆಯಲ್ಲಿ ತೊಡಗಿಸುವುದಕ್ಕೆ ಆ ಸಂಸ್ಥೆಯ ಪರಿಸ್ಥಿತಿ ಏನಿದೆ ಎಂಬುದನ್ನು ಪರಿಶೀಲನೆ ನಡೆಸಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಆ ಸಂಸ್ಥೆಗೆ ಕೊಡಬೇಕೆಂದು ತೀರ್ಮಾನ ಮಾಡಿಲ್ಲ. ಪರಿಶೀಲನೆ ಮಾಡುತ್ತಿದ್ದೇವೆ. ಆದ್ದರಿಂದ ತಮ್ಮ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಮಲ್ಲಾರಗೌಡ ಪಾಟೀಲ್.—ಮುಖ್ಯಮಂತ್ರಿಗಳು ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಸಂಕೇಶ್ವರ ಗಡಿ ಪ್ರದೇಶದಲ್ಲಿ ಇರುವಂಥ ಸ್ಥಳ. ಅಲ್ಲಿ ವೆಟರ್ನರಿ ಕಾಲೇಜು ಪ್ರಾರಂಭ ಮಾಡಿದರೆ ಹಣ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆಶ್ವಾಸನೆ ಕೊಟ್ಟಮೇಲೆ ಪರಿಶೀಲನೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದ್ದರಿಂದ ಆಶ್ವಾಸನೆಯನ್ನು ಪೂರ್ತಿ ಮಾಡುವುದಕ್ಕೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ಎಲ್. ಗೌಡ.—ಎಗ್ಸಾಮಿನ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಮಂಜೂರು ಮಾಡುತ್ತೇವೆ ಎಂದು ಕೊಟ್ಟಿಲ್ಲ.

ಶ್ರೀ ಬಾಪೂಗೌಡ ದರ್ಶನಾಪುರ.—ವೆಟರ್ನರಿ ಕಾಲೇಜುಗಳು ರಾಜ್ಯದಲ್ಲಿ ಬೇಕು ಎಂಬ ಬೇಡಿಕೆ ಇದೆ. ಎಷ್ಟೋ ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲದಿರುವುದರಿಂದ ಹೊಸದಾಗಿ ಈ ವರ್ಷದಲ್ಲಿ ವೆಟರ್ನರಿ ಕಾಲೇಜು ತೆರೆಯಬೇಕು ಎಂದು ಆ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದರು. ಆ ಕಮಿಟಿ ವರದಿ ಏನಾದರೂ ಬಂದಿದೆಯೇ ? ಬಂದಿದ್ದರೆ ಕಮಿಟಿಯವರು ಯಾವ ಹಣದಲ್ಲಿ ಕಾಲೇಜು ಮಾಡಬೇಕೆಂಬ ಅಭಿಪ್ರಾಯ ಕೊಟ್ಟಿದ್ದಾರೆ ?

ಶ್ರೀ ಬಿ. ಎಲ್. ಗೌಡ.—ಪಶುವೈದ್ಯ ಕಾಲೇಜು ರಾಜ್ಯಕ್ಕೆ ಬೇಕು ಎಂದು ತೀರ್ಮಾನ ಮಾಡಿದ್ದಾರೆ. ಆದರೆ ಯಾವ ಸ್ಥಳದಲ್ಲಿ ಪ್ರಾರಂಭ ಮಾಡಬೇಕು ಎಂಬುದನ್ನು ತೀರ್ಮಾನ ಮಾಡಿಲ್ಲ. ಕಮಿಟಿ ವರದಿ ಬಂದಿಲ್ಲ. ಇನ್ನೊಂದು ವಾರದಲ್ಲಿ ವರದಿ ಬರಬಹುದೆಂಬ ನಿರೀಕ್ಷೆ ಇದೆ.

ಒಬ್ಬ ಮಾನ್ಯ ಸದಸ್ಯರು.—ಪಶುವೈದ್ಯರು ರಾಜ್ಯದಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಕಾಲೇಜು ಪ್ರಾರಂಭ ಮಾಡಿದರೆ ಅಲ್ಲಿ ಶಿಕ್ಷಣ ಪಡೆದು ವೈದ್ಯರಾಗಿ ಬರಬೇಕಾದರೆ ತಡವಾಗುತ್ತದೆ. ಆದ್ದರಿಂದ ಡಿಪ್ಲೊಮಾ ಕೋರ್ಸ್ ಪ್ರಾರಂಭ ಮಾಡಿ ವೈದ್ಯರನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿರುವುದು ಪತ್ರಿಕೆಯಲ್ಲಿ ಬಂದಿದೆ. ಸಂಕೇಶ್ವರಕ್ಕೆ ಪಶುವೈದ್ಯ ಶಾಲೆ ಕೊಡುತ್ತೇವೆಂದು ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅದು ನಮ್ಮ ರೆಕಾರ್ಡ್‌ನಲ್ಲಿಲ್ಲ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಮಲ್ಲಾರಗೌಡ ಪಾಟೀಲ್.—ತಮ್ಮ ರೆಕಾರ್ಡ್‌ನಲ್ಲಿ ಈಗ ಹೋಗುತ್ತದೆ. ಆದರೆ ಅವರ ರೆಕಾರ್ಡ್‌ನಲ್ಲಿ ಏನಿದೆ ಅದು ನಮಗೆ ಬೇಕಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಬೆಂಗಳೂರಿನಲ್ಲಿರತಕ್ಕ ಪಶುವೈದ್ಯ ಕಾಲೇಜಿಗೆ ವ್ಯವಸಿತವಾದ ಆಸ್ಪತ್ರೆ ಇಲ್ಲದೇ ಇರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಿಂದೆ ಅದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು. ಆ ದಿಸೆಯಲ್ಲಿ ಏನಾದರೂ ಕೆಲಸ ನಡೆದಿದೆಯೇ ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರಿಗೆ ಏನೇನು ವಿವರ ಬೇಕು ಎಂದು ಸ್ಪಷ್ಟವಾಗಿ ಕೇಳಿದರೆ ಹೇಳುತ್ತೇನೆ. ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಈ ಪ್ರಶ್ನೆ ಇದಕ್ಕೆ ಸಂಬಂಧಪಟ್ಟಿಲ್ಲದೇ ಇರುವುದರಿಂದ ಅಧಿಕಾರಿಗಳು ಮಾನ್ಯ ಮಂತ್ರಿಗಳಿಗೆ ಮಾಹಿತಿ ಒದಗಿಸದೇ ಇರಬಹುದು. ಹೆಬ್ಬಾಳ್‌ನಲ್ಲಿರತಕ್ಕ ಕಾಲೇಜಿಗೆ ಇನ್‌ಟೇಕ್ 60 ಇತ್ತು. ತದನಂತರ 80 ಆಯಿತು. ಅದರ ನಂತರ 100 ಆಯಿತು. ಹೀಗಾಗಿ ಅಲ್ಲಿ ನಾಯಿ ಇಂಥದ್ದಕ್ಕೆಲ್ಲಾ ಶುಶ್ರೂಷೆ ಮಾಡುವುದಕ್ಕೆ ಸವಲತ್ತಿದೆಯೇ ವಿನಹ ಹೆಚ್ಚಿನ ಅವಕಾಶ ಇಲ್ಲ. ಆದ್ದರಿಂದ ಮಲ್ಲೇಶ್ವರ ಆಸ್ಪತ್ರೆಯನು ಹೆಬ್ಬಾಳ್‌ನಲ್ಲಿನ ಪಶುವೈದ್ಯ ಕಾಲೇಜಿಗೆ ವಹಿಸಿಕೊಡಬೇಕು ಎಂಬ ತೀರ್ಮಾನ ಹಿಂದೆ ಆಗಿತ್ತು. ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ? ಗಮನಹರಿಸಿದೆಯೇ ?

ಶ್ರೀ ಬಿ. ಎಲ್. ಗೌಡ.—ಅದಕ್ಕೆ ನೋಟೀಸ್ ಬೇಕು ಸ್ವಾಮಿ.

ವಿಷಯ: ಬಾಗಲಕೋಟೆ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ಕೊಳಾಯಿ ಮೂಲಕ ಕುಡಿಯುವ ನೀರಿನ ಸರಬರಾಜು.

ಪ್ರ. 208 (44) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ್‌ಗುಡ್ಡ).—ಮಾನ್ಯ ಗ್ರಾಮೀಣ ಅಭಿವೃದಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರೇ:—

(ಅ) ಬಾಗಲಕೋಟೆ ತಾಲ್ಲೂಕಿನ ಬೇವೂರ ಗ್ರಾಮದಲ್ಲಿ ನೀರು ಸರಬರಾಜು (ನಳದ ಯೋಜನೆ) ಮಾಡುವ ವಿಚಾರ ಸರಕಾರದವರ ಪರಿಶೀಲನೆಯಲ್ಲಿ ಇದೆಯೇ;